1) ಗಡಿಲಿಂಗದಳ್ಳಿ ಮತ್ತು ಇತರೆ 4 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ (ಅಂದಾಜು ಮೊತ್ತ ₹ 400.00 ಲಕ್ಷಗಳು)
2) ಪಸ್ತಾಪೂರ ಹಾಗೂ ಇತರೆ 8 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ (ಅಂದಾಜು ಮೊತ್ತ ₹ 540.00 ಲಕ್ಷಗಳು)
3) ಗಡಿಕೇಶ್ವರ ಮತ್ತು ಇತರೆ 4 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ (ಅಂದಾಜು ಮೊತ್ತ ₹ 500.00 ಲಕ್ಷಗಳು)

ಇದಲ್ಲದೆ, ಚಿಂಚೋಳಿ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯಡಿ ಶಾಶ್ವತ ವ್ಯವಸ್ಥೆ ಕಲ್ಪಿಸಲು ಅಗತ್ಯವಿರುವ ಪ್ರಾಥಮಿಕ ಯೋಜನಾ ವರದಿ (PSR) ತಯಾರಿಕೆ ನಡೆದಿದೆ.

ಬೀದರ್ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳು

242 (704), ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಯಾವ ಯಾವ ಯೋಜನೆ ಅಡಿಯಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ; ಈ ಕಾಮಗಾರಿಗಳಿಗೆ ಎಷ್ಟು ಅನುದಾನ ನೀಡಲಾಗಿದೆ; ಎಷ್ಟು ವೆಚ್ಚ ಮಾಡಲಾಗಿದೆ; ಎಷ್ಟು ಕಾಮಗಾರಿಗಳು ಪೂರ್ಣವಾಗಿದೆ (ವಿವರ ನೀಡುವುದು);

ಆ) ಜಲನಿರ್ಮಲ, NRDWP ಹಾಗೂ ಬಹುಗ್ರಾಮಗಳ ಕುಡಿಯುವ ನೀರಿನ ಯೋಜನೆಗಳಿಗೆ ಎಷ್ಟು ಅನುದಾನ ನೀಡಲಾಗಿದೆ; ಎಷ್ಟು ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ; ಇವುಗಳಲ್ಲಿ ಎಷ್ಟು ಪೂರ್ಣಗೊಂಡಿವೆ (ಸಂಪೂರ್ಣ ವಿವರ ನೀಡುವುದು);

ಇ) ಅನೇಕ ಕಾಮಗಾರಿಗಳು ಕಾಗದದ ಮೇಲೆ ಮುಗಿದಿದ್ದರೂ ಇಲ್ಲಿಯವರೆವಿಗೂ ಜನಸಾಮಾನ್ಯರ ಉಪಯೋಗಕ್ಕೆ ಬಾರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಈ ರೀತಿ ಅಕ್ರಮವೆಸಗಿದವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಲಿದೆ?

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಬೀದರ್ ಜಿಲ್ಲೆಗೆ ಕಳೆದ 3 ವರ್ಷ ಅವಧಿಯಲ್ಲಿ ಕುಡಿಯುವ ನೀರು ಸರಬರಾಜು ಯೋಜನೆ ಅಡಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನ ಮತ್ತು ವೆಚ್ಚದ ವಿವರವನ್ನು ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ.

ಆ) ಜಲನಿರ್ಮಲ, NRDWP ಮತ್ತು ಬಹುಗ್ರಾಮಗಳ ಕುಡಿಯುವ ನೀರಿನ ಯೋಜನೆಗಳ ಹಾಗೂ ಪೂರ್ಣಗೊಂಡಿರುವ ಕಾಮಗಾರಿಗಳ ವಿವರವನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಇ) ಕುಡಿಯುವ ನೀರಿನ ಯೋಜನೆಗಳನ್ನು ಕಾಗದದ ಮೇಲೆ ಪೂರ್ಣಗೊಳಿಸಿ ಸಾರ್ವಜನಿಕ ಉಪಯೋಗಕ್ಕೆ ಬಾರದಿರುವ ಪ್ರಕರಣಗಳು ಸರ್ಕಾರಕ್ಕೆ ವರದಿಯಾಗಿಲ್ಲ.

ಈ) ಅನ್ವಯಿಸುವುದಿಲ್ಲ.

ಅನುಬಂಧ–1

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:704ರ ಲಗತ್ತು.

(ರೂ ಲಕ್ಷಗಳಲ್ಲಿ)

ಕ್ರ ಸಂ.	ವರ್ಷ	ರಾಜ್ಯ ವಲಯ		ಕೇಂದ್ರ ವಲಯ		ಒಟ್ಟು			
		ಬಿಡುಗಡೆಯಾದ ಅನುದಾನ	ಖರ್ಚು	ಬಿಡುಗಡೆಯಾದ ಅನುದಾನ	ಖರ್ಚು	ಬಿಡುಗಡೆಯಾದ ಅನುದಾನ	ಖರ್ಚು	ಮಂಜೂರಾದ ಕುಡಿಯುವ ನೀರಿನ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ
1	2	3	4	5	6	7	8	9	10
1	2011–12	1535.090	1505 270	955.330	955.000	2490 420	2460.270	443	443
2	2012–13	1345 600	1267.790	1975 490	1837 300	3321.090	3105.090	643	643
3	2013–14	3292.710	3290.600	2291.790	2020.800	5584.500	5311.400	1780	1684
16 ಬಹುಗ್ರಾಮ ಯೋಜನೆಗಳಡಿ 200 ಸಮಸ್ಯಾತ್ಮಕ ಜನವಸತಿಗಳನ್ನು ಆಪರಿಸಲು PSR ಸಿದ್ಧಪಡಿಸಲಾಗಿದೆ									

ಅನುಬಂಧ–2

ಜಲನಿರ್ಮಲ ಯೋಜನೆಯಡಿ ಅನುಷ್ಠಾನಗೊಳಿಸಲಾದ ಕುಡಿಯುವ ನೀರಿನ ಕಾಮಗಾರಿಗಳ ವಿವರ.

ಜಲನಿರ್ಮಲ ಯೋಜನೆ ಕಾಮಗಾರಿಗಳಿಗಾಗಿ 2010–11 ರಿಂದ 2013–14 ನವೆಂಬರ್‌ವರೆಗೆ ಒಟ್ಟು ರೂ.101.73ಕೋಟಿ ಅನುದಾನ ಬಿಡುಗಡೆಯಾಗಿದೆ. ಇದರಲ್ಲಿ 110 ರಸ್ತೆ ಮತ್ತು ಚರಂಡಿ ಕಾಮಗಾರಿಗಳು, 23 ಕುಡಿಯುವ ನೀರು ಸರಬರಾಜು ಕಾಮಗಾರಿಗಳು ಮತ್ತು 2 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಕೈಗೊಳ್ಳಲಾಗಿದೆ ಕೈಗೊಂಡ ಎಲ್ಲಾ 110 ರಸ್ತೆ ಮತ್ತು ಚರಂಡಿ ಕಾಮಗಾರಿಗಳು, 23 ಕುಡಿಯುವ ನೀರಿನ ಕಾಮಗಾರಿಗಳು (ಎಸ್.ಎಸ್.ಐ & ಎಸ್. ಎಸ್. ಆರ್.) ಹಾಗೂ 2 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಪೂರ್ಣಗೊಂಡ 2 ಬಹುಗ್ರಾಮ ನೀರು ಸರಬರಾಜು ಯೋಜನೆಗಳ ಪೈಕಿ ಒಂದು ಯೋಜನೆ (ಕಮರಾಣಾ) ಪರೀಕ್ಷಾರ್ಥ ಚಾಲನೆ ಹಂತದಲ್ಲಿವೆ.